ಕ್ರೀಡಾಂಗಣ ನಿರ್ಮಾಣ

200(580); ಶ್ರೀ ಬಸವರಾಜ್ ಬಿ. ಎ. (ಕೆ.ಆರ್. ಪುರಂ)

ಅ) ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊರಾಂಗಣ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ಮತ್ತು ಯಾವ ಭಾಗದಲ್ಲಿ ಸ್ಥಳ ಗುರುತಿಸಲಾಗಿದೆ; ಯಾವಾಗ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು;

ಇ) ಸದರಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ಭೂದಾಖಲೆ ಗುರುತಿಸಲಾಗಿದೆಯೇ (ಸಂಪೂರ್ಣ ವಿವರ ನೀಡುವುದು)

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುಜನಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಶ್ರೀ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊರಾಂಗಣ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಮಲ್ಲಾಪುರ ನೀರಾವರಿ ಯೋಜನೆ

201(538); ಶ್ರೀ ನಿಲಪ್ಪ ಶಿವಣ್ಣನವರ್ (ಬ್ಯಾಡಗಿ)

ಅ) ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆಯು ಪ್ರಾರಂಭವಾಗಿರುವುದು ಯಾವಾಗ ;

ಆ) ಸದರೀ ಯೋಜನೆಗಾಗಿ ಪ್ರಥಮ ಹಂತ ಹಾಗೂ ದ್ವಿತೀಯ ಹಂತದ ಯೋಜನೆಗೆ ಮಂಜೂರಾದ ಹಣಎಷ್ಟು ;

ಇ) ಈ ಯೋಜನೆಗಾಗಿ ರೈತರು ಕಳೆದುಕೊಂಡ ಜಮೀನುಗಳ ಪರಿಹಾರ ಮೊತ್ತವೆಷ್ಟು; ಈ ಪೈಕಿ ರೈತರಿಗೆ ನೀಡಿದ ಪರಿಹಾರ ಮೊತ್ತ ಎಷ್ಟು ಹಾಗೂ ಬಾಕಿ ಇರುವ ಮೊತ್ತ ಎಷ್ಟು ಮೊತ್ತವನ್ನು ಇದುವರೆಗೂ ಪಾವತಿ ಮಾಡದೇ ಇರಲು ಕಾರಣಗಳೇನು; ಯಾವಾಗ ಬಾಕಿ ಮೊತ್ತವನ್ನು ಪಾವತಿ ಮಾಡಲಾಗುವುದು ?

ಶ್ರೀ ಎಂ. ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆಯನ್ನು 2005–06ನೇ ಸಾಲಿನಲ್ಲಿ ಪ್ರಾರಂಭಿಸಲಾಗಿರುತ್ತದೆ.

ಆ) ಈ ಯೋಜನೆಗೆ ಎರಡೂ ಹಂತಗಳಿಗೆ ಸೆರಿದಂತೆ ₹. 115.40 ಕೋಟಿಗಳ ಅಂದಾಜಿಗೆ ಅನುಮೋದನೆ ದೊರೆತಿರುತ್ತದೆ.

ಇ) ಈ ಯೋಜನೆಗಾಗಿ ಇದುವರೆಗಿನ ಭೂಸ್ವಾಧೀನ ಪ್ರಕರಣಗಳಲ್ಲಿ ರೈತರು ಕಳೆದುಕೊಂಡ ಜಮೀನುಗಳ ಪರಿಹಾರ ಮೊತ್ತ ₹. 859.00 ಲಕ್ಷಗಲಾಗಿದ್ದು, ಇದುವರೆಗೆ ₹..186.00 ಲಕ್ಷಗಳನ್ನು ಪಾವತಿಸಲಾಗಿದೆ. ಹಾಗೂ ₹. 673.00 ಲಕ್ಷಗಳು ಪಾವತಿಗಾಗಿ ಬಾಕಿ ಇರುತ್ತದೆ. ಕೆಲವು ಪ್ರಕರಣಗಳು ಅವಾರ್ಡ್ ಹಂತದಲ್ಲಿರುವುದರಿಂದ ಅವುಗಳು ಅನುಮೋದನೆ ಬಳಿಕ ಹಂತ ಹಂತವಾಗಿ ಪಾವತಿಸಲು ಕ್ರಮ ಜರುಗಿಸಲಾಗುವುದು.

ಕಾಲುವೆ ಕಾಮಗಾರಿ ಯೋಜನೆ

202 (539); ಶ್ರೀ ನೀಲಪ್ಪ ಶಿವಣ್ಣನವರ್ (ಬ್ಯಾಡಗಿ)

ಅ) ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆಯ ಕಾಮಗಾರಿಯು ಕಳಪೆ ಮಟ್ಟ